Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 29-07-2022

**ಪತ್ರಿಕಾ ಪ್ರಕಟಣೆ:**

# ರಾಜ್ಯಮಟ್ಟದ ಸ್ಪರ್ಧೆಯಲ್ಲಿ ವಿ.ಡಿ.ಐ.ಟಿ. ವಿದ್ಯಾರ್ಥಿಗಳ ಪ್ರಾಜೆಕ್ಟ್ ಪ್ರದರ್ಶನ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯು ಆಯೋಜಿಸಿದ್ದ ರಾಜ್ಯಮಟ್ಟದ ಪ್ರಾಜೆಕ್ಟ್ ಪ್ರದರ್ಶನ ಸ್ಪರ್ಧೆ "**ಸೃಷ್ಟಿ 2022**" ಯಲ್ಲಿ ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳದ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ ಜನಪಯೋಗಿ 2 ಯೋಜನಾ ಕಾರ್ಯಗಳು ಪ್ರದರ್ಶಿಸಲ್ಪಟ್ಟತು. ಬೆಂಗಳೂರಿನ ಬಿ.ಎಂ.ಎಸ್.ಸಿ.ಇ.ಟಿ. ಮಹಾವಿದ್ಯಾಲಯದಲ್ಲಿ ಜುಲೈ 25 ರಿಂದ 27 ರ ವರೆಗೆ ಈ ಸ್ಪರ್ಧೆ ಜರುಗಿತು.

ಮಹಾವಿದ್ಯಾಲಯದ ಮೆಕ್ಯಾನಿಕಲ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳು ಚಲನ ಸಮಸ್ಯೆಯಿಂದ ಬಳಲುತ್ತಿರುವರಿಗೆ ಅಭಿವೃದ್ಧಿಪಡಿಸಿದ್ದ " ರೋಗಿಯನ್ನು ಎತ್ತುವ ಹಾಗೂ ಸಾಗಿಸುವ ಸಾಧನ" ವನ್ನು ಈ ಸ್ಪರ್ಧೆಯಲ್ಲಿ ಪ್ರದರ್ಶಿಸಿದರು. ಪ್ರೊ. ನವೀನ್ ಸಿ.ಎಸ್. ಅವರ ಮಾರ್ಗದರ್ಶನದಲ್ಲಿ ಕು.ಫರ್ದಿನ ಅಹಮ್ಮದ್, ಕು.ಪ್ರಹ್ಲಾದ, ಕು.ರಾಮದಾಸ್, ಕು.ಮಂಜುನಾಥ್ ಈ ಸಾಧನವನ್ನು ಅಭಿವೃದ್ಧಿಪಡಿಸಿದ್ದಾರೆ. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥರಾದ ಡಾ. ಮಹೇಂದ್ರ ದೀಕ್ಷಿತ್ ಹಾಗೂ ಪ್ರೊ. ನಿಖಿಲ್ ಕುಲಕರ್ಣಿ ಅವರ ಮಾರ್ಗದರ್ಶನದಲ್ಲಿ ಕುಮಾರಿ.ದೀಪ್ತಿ ಎಂ, ಕುಮಾರಿ.ಕೀರ್ತಿ ಎಂ, ಕುಮಾರಿ.ವಾಣಿ ಇವರುಗಳು ಶಿಲೀಂದ್ರಗಳಿಂದ ಎಲೆಗಳ ಮೇಲಾಗುವ ರೋಗವನ್ನು ಪತ್ತೆಹಚ್ಚುವ ಯೋಜನಾ ಕಾರ್ಯವನ್ನು ಸೃಷ್ಟಿ 2022 ರಲ್ಲಿ ಪ್ರದರ್ಶಿಸಿದರು. ಚಿತ್ರ ಸಂಸ್ಕರಣ ತಂತ್ರಜ್ಞಾನವನ್ನು ಬಳಸಿ ಶಿಲೀಂದ್ರಗಳಿಂದ ಎಲೆಯ ಮೇಲ್ಭಾಗದ ಬದಲಾವಣೆಯನ್ನು ಗುರುತಿಸಿ ರೋಗವನ್ನು ಪತ್ತೆ ಹಚ್ಚುವುದು ಯೋಜನಾ ಕಾರ್ಯದ ಉದ್ದೇಶವಾಗಿದೆ.

ರಾಜ್ಯಮಟ್ಟದ ಪ್ರಾಜೆಕ್ಟ್ ಸ್ಪರ್ಧೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಯೋಜನಾ ಕಾರ್ಯವು ಪ್ರದರ್ಶನ ಗೊಂಡಿರುವುದು ಹರ್ಷದ ವಿಷಯವೆಂದು ಪ್ರಾಂಶುಪಾಲರಾದ ಡಾ.ವಿ.ಎ.ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


118
119


SRISHTI
Supported by
Host Institute
In Association with
ABVP
State Level Engineering Students
2022